ಬೀದರ್‌ನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಆರು ವಿವಿಧ ಕೋರ್ಸುಗಳನ್ನು ನಡೆಸುತ್ತಿರುವುದು.

೪೫೦. ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಆರು ವಿವಿಧ ಕೋರ್ಸುಗಳನ್ನು ನಡೆಸುತ್ತಿರುವುದು ನಿಜವೇ?

ಆ) ಈ ಮೇಲ್ಕಂಡ ಕಾಲೇಜಿಗೆ ಮಂಜೂರಾಗಿರುವ ಬೋಧಕ ಹುದ್ದೆಗಳೆಷ್ಟು ? ಮತ್ತು ಈಗ ಎಷ್ಟು ಜನ ಖಾಯಂ ಬೋಧಕ ವರ್ಗದವರು ಕೆಲಸ ನಿರ್ವಹಿಸುತ್ತಿದ್ದಾರೆ ?

ಇ) ಚಿಂತಾಮಣಿ ಹಾಗೂ ದಾವಣಗೆರೆಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಎಲೆಕ್ಟ್ರಾನಿಕ್ಸ್ ಕೋರ್ಸಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆಗಿಂತ ಬೀದರ್‌ನ ಸರ್ಕಾರಿ ಪಾಲಿಟೆಕ್ನಿಕ್‌ಗೆ ಕಡಿಮೆ ಹುದ್ದೆಗಳು ಮಂಜೂರಾಗಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು)—

ಅ) ಹೌದು. ಇದು ನಿಜ

ಆ)

ಮಂಜೂರಾದ ಬೋಧಕ ಹುದ್ದೆಗಳು		ಈಗ ಕೆಲಸ ಮಾಡುತ್ತಿರುವವರ ಸಂಖ್ಯೆ	
೧) ಪ್ರಾಂಶುಪಾಲರು	೧	೧) ಪ್ರಾಂಶುಪಾಲರು	೧
೨) ವಿಭಾಗೀಯ ಮುಖ್ಯಾಧಿಕಾರಿಗಳು	೭	೨) ವಿಭಾಗೀಯ ಮುಖ್ಯಾಧಿಕಾರಿಗಳು	೫
೩) ಉಪನ್ಯಾಸಕರು	೩೪	೩) ಉಪನ್ಯಾಸಕರು	೨೬

ಇ) ಹೌದು. ಬೀದರ್‌ನ ಸರ್ಕಾರಿ ಪಾಲಿಟೆಕ್ನಿಕ್‌ಗೆ ಟೆಲಿಕಮ್ಯುನಿಕೇಷನ್ (ಎಲೆಕ್ಟ್ರಾನಿಕ್ಸ್) ಕೋರ್ಸನ್ನು ೧೯೮೬ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದ್ದು, ಆಗ ಇದ್ದಂತಹ ಪಠ್ಯಕ್ರಮಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ಮಂಜೂರು ಮಾಡಲಾಗಿತ್ತು. ನಂತರ ಹೊಸ ಪಠ್ಯಕ್ರಮವನ್ನು ಜಾರಿಗೆ ತರಲಾಗಿ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಉಂಟಾಗಿದೆ. ಈಗ ಜಾರಿಯಲ್ಲಿರುವ ಮಿತವ್ಯಯ ಆದೇಶ ನ್ವಯ, ಹೆಚ್ಚುವರಿ ಸಿಬ್ಬಂದಿಯನ್ನು ಮಂಜೂರು ಮಾಡಲು ಸಾಧ್ಯವಾಗಿಲ್ಲ.

ಕರ್ನಾಟಕ ರಾಜ್ಯದಲ್ಲಿ ಹೊಸ ಬಿ.ಎಡ್ ಮತ್ತು ಬಿ.ಪಿ.ಎಡ್. ಕಾಲೇಜು ಮಂಜೂರಾತಿ ಬಗ್ಗೆ

೪೪೪. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವ್ಯವಸಾಯ ತೋಟಗಾರಿಕೆ ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹೊಸ ಬಿ.ಎಡ್. ಮತ್ತು ಬಿ.ಪಿ.ಎಡ್ ಕಾಲೇಜುಗಳನ್ನು ಸ್ಥಾಪಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? (ಯಾವ ಯಾವ ಸಂಸ್ಥೆಗಳಿಂದ ಬಂದಿದೆ ಎಂಬ ವಿವರ ಒದಗಿಸಿಕೊಡಬೇಕು)

ಆ) ಅವುಗಳಿಗೆ ಮಂಜೂರಾತಿ ನೀಡಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) ೧ ಸರ್ಕಾರಕ್ಕೆ ಸಂಸ್ಥೆಗಳಿಂದ ನೇರವಾಗಿ ಬಂದ ಅರ್ಜಿಗಳು

ವರ್ಷ	ಬಿ.ಎಡ್.	ಬಿ.ಪಿ.ಎಡ್.
೧೯೮೯-೯೯	೩೫	೧೬
೧೯೯೯-೯೦	೧೪	೦೨

(ವಿವರಗಳಿಗೆ ಅನುಬಂಧ ನೋಡುವುದು).

೨. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯಂತೆ ಸ್ವೀಕೃತಿಯಾದ ಪ್ರಸ್ತಾವನೆ, ಅರ್ಜಿಗಳ ವಿವರ

೧೯೮೮-೮೯ ೧೯೮೯-೯೦ ಯಾವುದೂ ಇಲ್ಲ.

ಆ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ ಪ್ರಕರಣ ೫೩ ರಂತೆ ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸಂಬಂಧಿಸಿದ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಬೇಕು. ಇಂತಹ ಅರ್ಜಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ವಿಶ್ವವಿದ್ಯಾನಿಲಯದಿಂದ ಪ್ರಸ್ತಾವನೆ ಸ್ವೀಕೃತಿಯಾದರೆ ಮಾತ್ರ ಉದ್ಭವಿಸುತ್ತದೆ. ಯಾವುದೇ ವಿಶ್ವವಿದ್ಯಾನಿಲಯದಿಂದ ಅರ್ಜಿಗಳು/ಪ್ರಸ್ತಾವನೆ ಸ್ವೀಕೃತಿಯಾಗಿಲ್ಲದೇ ಇರುವುದರಿಂದ ಎಲ್ಲಾ ಮಾನವಿದಾರರಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ ಪ್ರಕರಣ ೫೩ರಂತೆ ಸಂಬಂಧಿಸಿದ ವಿಶ್ವವಿದ್ಯಾನಿಲಯವನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಹೆಚ್. ಕೌಜಲಗಿ ಇವರ ಚುಕ್ಕೆ ಚುರುಕಿಲ್ಲದ ಪ್ರಶ್ನೆ ಸಂಖ್ಯೆ ೪೪೪ರ ಉತ್ತರಗಳ ಅನುಬಂಧ.

೧೯೮೮-೮೯ನೇ ಸಾಲಿಗೆ ಸರ್ಕಾರದಲ್ಲಿ ಸ್ವೀಕೃತಿಯಾದ ಹೊಸ ಬಿ. ಎಡ್. ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆಗಿನ ಅರ್ಜಿಗಳ ವಿವರ.

ಕ್ರಮಸಂಖ್ಯೆ :

೧ ಶ್ರೀ ಕಾಳಿದಾಸ ವಿದ್ಯಾ ಸಂಸ್ಥೆ ಕೊಟ್ಟೂರು,
೨ ಶ್ರೀನಿವಾಸ ಎಜುಕೇಷನ್ ಸೊಸೈಟಿ, ಶಿರುಗುಪ್ಪ,
೩ ಪಾಂಚಜನ್ಯ ವಿದ್ಯಾ ಪೀಠ' ವೆಲ್‌ಫೇರ್ ಟಸ್ಟ್ ಬೆಂಗಳೂರು,
೪ ಅಮರ ಭಾರತಿ ವಿದ್ಯಾ ಕೇಂದ್ರ, ಬೆಂಗಳೂರು.
೫ ಜನತಾ ಪ್ರವೀಣ ಶಿಕ್ಷಣ ಸಂಸ್ಥೆ, ಬೀದರ್,
೬ ಶ್ರೀ ಜಗದ್ಗುರು ಮೂರು ಸಾವಿರ ಮಠ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ,
೭ ಶಕ್ತಿ ಶಿಕ್ಷಣ ಟ್ರಸ್ಟ್' ಬೆಂಗಳೂರು,
೮ ಶ್ರೀ ಪವಿತ್ರ ವಿದ್ಯಾ ಸಂಸ್ಥೆ, ಕುಶಾಲನಗರ.
೯ ಕರ್ನಾಟಕ ಆರ್ಟ್ಸ್ ಮತ್ತು ಎಜುಕೇಷನ್ ಸೊಸೈಟಿ,
೧೦ ನಿಟ್ಟೂರು ಎಜುಕೇಷನ್ ಸೊಸೈಟಿ. ಬೀದರ್ (ಬಾಲ್ಕಿ)
೧೧ ಗವಿ ರಂಗನಾಥಸ್ವಾಮಿ ಸಹಕಾರ ವಿದ್ಯಾ ಸಂಸ್ಥೆ,
೧೨ ಶ್ರೀ ಬಸವೇಶ್ವರ ವಿದ್ಯಾ ಸಂಸ್ಥೆ, ತಿಪಟೂರು,
೧೩ ಶ್ರೀ ವೀರಭದ್ರೇಶ್ವರ ಎಜುಕೇಷನ್ ಸೊಸೈಟಿ,
೧೪ ಶ್ರೀ ಪಟೇಲ್ ವಿದ್ಯಾ ಸಂಸ್ಥೆ, ಗುಬ್ಬಿ,
೧೫ ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘ, ಬಳ್ಳಾರಿ,
೧೬ ಶ್ರೀ ಅರವಿಂದ ಎಜುಕೇಷನ್ ಸೊಸೈಟಿ, ದೊಡ್ಡಬಳ್ಳಾಪುರ,
೧೭ ಕರ್ನಾಟಕ ಪಬ್ಲಿಕ್ ಎಜುಕೇಷನ್ ಸೊಸೈಟಿ ಔರಾದ್, ಬೀದರ್
೧೮ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ, ಹುನಗುಂದ,
೧೯ ಶ್ರೀ ಶಿವರಾತ್ರೇಶ್ವರ ಮಹಾವಿದ್ಯಾಪೀಠ, ಬೆಂಗಳೂರು,
೨೦ ವಿನೀತ್ ಎಜುಕೇಷನ್ ಸೊಸೈಟಿ, ಬೆಂಗಳೂರು
೨೧ ಸಂಜಯ್ ವಿದ್ಯಾ ಕೇಂದ್ರ, ಸಾಗರ
೨೨ ಶ್ರೀ ವಿದ್ಯಾಧರೆ ಎಜುಕೇಷನ್ ಸೊಸೈಟಿ, ಕುಣಿಗಲ್,
೨೩ ಶ್ರೀ ದುರದುಂಡಿಶ್ವರ ವಿದ್ಯಾ ಸಂವರ್ಧಕ ಸಂಘ, ಸಂಕೇಶ್ವರ,
೨೪ ಆರ್ಯನ್ ಹೈಸ್ಕೂಲ್ ಸಂಘ, ತುಮಕೂರು,

೨೫ ಪಾಂಚಜನ್ಯ ವಿದ್ಯಾ ಪೀಠ ಬೆಂಗಳೂರು (ಎರಡನೇ ಬಾರಿಯ ಅರ್ಜಿ).
೨೬ ಶ್ರೀ ಪದ್ಮಾರಾಜ ವಿದ್ಯಾವರ್ಧಕ ಸಂಘ,
೨೭ ಮರಿಯನ್ ಶಿಕ್ಷಣ ಸಂಸ್ಥೆ, ಬೆಂಗಳೂರು,
೨೮ ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ವಿದ್ಯಾ ಸಂಸ್ಥೆ, ನಾಯಕನ ಕಟ್ಟೆ
೨೯ ಜ್ಞಾನವಿಕಾಸ ಶಿಕ್ಷಣ ಕೇಂದ್ರ, ಜಗಳೂರು,
೩೦ ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ,
೩೧ ಆಮರ್ ವಿಜುಕೇಷನಲ್ ಅಂಡ್ ವೆಲ್‌ಫೇರ್ ಅಸೋಷಿಯೇಷನ್, ಬಾಗಲಕೋಟೆ.
೩೨ ವಿದ್ಯಾ ಸಂವರ್ಧಕ ಮಂಡಲ, ನಿಪ್ಪಾಣಿ,
೩೩ ನಾರ್ಥ್ ಕರ್ನಾಟಕ ಸೋಷಿಯಲ್ ಅಂಡ್ ಎಜುಕೇಷನಲ್ ಸೊಸೈಟಿ, ಔರಾದ್,
೩೪ ನ್ಯಾಷನಲ್ ಇಜುಕೇಷನ್ ಟ್ರಸ್ಟ್, ರಾಮದುರ್ಗ,
೩೫ ಲೋಕಸೇವಾ ಪ್ರತಿಷ್ಠಾನ, ಗುಳೇದಗುಡ್ಡ,

೧೯೯೯-೨೦ ಸಾಲಿಗೆ ಸರ್ಕಾರಕ್ಕೆ ನೇರವಾಗಿ ಹೊಸ ಬಿ. ಎಡ್. ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಬಂದ ಅರ್ಜಿಗಳ ವಿವರ.

ಕ್ರಮಸಂಖ್ಯೆ :

೧ ಭಾರತಿ ಮಹಿಳಾ ಸಮಾಜ, ಹಳ್ಳದಹಳ್ಳಿ,
೨ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ,
೩ ಶ್ರೀ ವೀಣ ಶಾರದ ಶಿಕ್ಷಣ ಸಂಸ್ಥೆ ತಿಪಟೂರು,
೪ ದಿ ಪ್ರೊಗ್ರೇಸಿವ್ ಇಜುಕೇಷನ್ ಟ್ರಸ್ಟ್, ಗುಳ್ಳೇದಗುಡ್ಡ.
೫ ಶ್ರೀ ಗುರು ಮಲ್ಲೇಶ್ವರ ವಿದ್ಯಾ ಸಂಸ್ಥೆ, ಕೊಳ್ಳೇಗಾಲ,
೬ ಡಾ : ಬಿ. ಆರ್. ಅಂಬೇಡ್ಕರ್ ವಿದ್ಯಾ ಸಂಸ್ಥೆ, ಬ್ಯಾಡಗಿ,
೭ ಎವರ್ ಬ್ರೈಟ್ ಶಿಕ್ಷಣ ಸಂಸ್ಥೆ' ದೊಡ್ಡಬಳ್ಳಾಪುರ,
೮ ಚರ್ಚ್ ಆಫ್ : ಸೌತ್ ಇಂಡಿಯಾ, ಬೆಂಗಳೂರು,
೯ ವಿಶ್ವಮಾನ್ಯ ವಿದ್ಯಾ ಟ್ರಸ್ಟ್, ಬಾಗೇಪಲ್ಲಿ,
೧೦ ಮೃತ್ಯುಂಜಯ ವಿದ್ಯಾಪೀಠ, ಹಂಸಬಾವಿ.
೧೧ ಶ್ರೀ ಗುರುಕೃಪಾ ವಿದ್ಯಾವರ್ಧಕ ಸಂಘ, ಅನವಟ್ಟಿ
೧೨ ಶ್ರೀ ಗುರುರಾಜ ಶಿಕ್ಷಣ ಟ್ರಸ್ಟ್, ಗೌರಿಬಿದನೂರು,
೧೩ ರಾಷ್ಟ್ರೀಯ ಲಕ್ಷಣ ಸಮಿತಿ, ಬಿ. ಆರ್, ಪ್ರಾಜೆಕ್ಟ್,
೧೪ ಅಂಜುಮಾನ್-ಇ-ಇಸ್ಲಾಮ್ ಸಂಸ್ಥೆ, ಬಿಜಾಪುರ,

೧೯೯೯-೨೦ನೇ ಸಾಲಿಗೆ ಹೊಸ ಬಿ. ಪಿ. ಎಡ್. ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರಕ್ಕೆ ನೇರವಾಗಿ ಬಂದ ಅರ್ಜಿಗಳ ವಿವರ.

೧ ಕಿತ್ತೂರ ರಾಣಿ ಚೆನ್ನಮ್ಮ ಶಿಕ್ಷಣ ಸಂಸ್ಥೆ. ಬೈಲಹೊಂಗಲ,
೨ ಶ್ರೀ ಗವಿ ರಂಗನಾಥಸ್ವಾಮಿ, ಸಹಕಾರ ವಿದ್ಯಾ ಸಂಸ್ಥೆ,
೩ ಜನತಾ ಪ್ರವೀಣ ಶಿಕ್ಷಣ ಸಂಸ್ಥೆ, ಬೀದರ್.
೪ ಟಿ. ಎಂ, ಎ. ಇ. ಸಂಸ್ಥೆ, ಹಾವೇರಿ,
೫ ಮಾಡ್ರನ್ ಇಂಡಿಯನ್ ಎಜುಕೇಷನ್ ಸೊಸೈಟಿ, ಬೀದರ್
೬ ಮಯೂರ ಎಜುಕೇಷನ್ ಸೊಸೈಟಿ,
೭ ವಿಜಯ ಮಹಾತೇಂಶ ವಿದ್ಯಾವರ್ಧಕ ಸಂಘ ಹುನಗುಂದ,

೮ ಬಿ. ಎಲ್. ಡಿ. ಇ. ಸಂಸ್ಥೆ ಬಿಜಾಪುರ,

೯ ಜನತಾ ವೆಲ್‌ಫೇರ್ ಎಜುಕೇಷನ್ ಸೊಸೈಟಿ, ಬೀದರ್,

೧೦ ಪಾಂಚಜನ್ಯ ವಿದ್ಯಾಪೀಠ, ಬೆಂಗಳೂರು,

೧೧ ಶಿವಾಜಿ ಶಿಕ್ಷಣ ಸಂಸ್ಥೆ, ಬಾದ್,

೧೨ ಕಿತ್ತೂರು ರಾಣಿ ಚೆನ್ನಮ್ಮ ಶಿಕ್ಷಣ ಸಂಸ್ಥೆ, ಬೈಲಹೊಂಗಲ (ಎರಡನೇ ಬಾರಿಯ ಅರ್ಜಿ)

೧೩ ಶ್ರೀ ಭಾಯಾ ಶ್ರೀ ಮಹಾತ್ಮ ವಿದ್ಯಾ ಸಂಸ್ಥೆ, ಮಳಲಿ,

೧೪ ಶ್ರೀ ಅನಾಥಸೇವಾಶ್ರಮ ಟ್ರಸ್ಟ್, ಮಲ್ಲಾಡಿಹಳ್ಳಿ,

೧೫ ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ

೧೬ ಭಾಗ್ಯಜ್ಯೋತಿ ವಿದ್ಯಾ ಸಂಸ್ಥೆ ಚಿತ್ರದುರ್ಗ.

೧೯೮೯–೯೦ನೇ ಸಾಲಿಗೆ ಹೊಸ ಬಿ. ಪಿ. ಎಡ್. ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ನೇರವಾಗಿ ಸಂಸ್ಥೆಗಳಿಂದ ಬಂದ ಅರ್ಜಿಗಳ ವಿವರ.

೧ ವೈ. ಎಂ. ಸಿ. ಎ. ಶಿಕ್ಷಣ ಸಂಸ್ಥೆ ಬೆಂಗಳೂರು

೨ ಕೆ. ಆರ್. ಸಿ. ಶಿಕ್ಷಣ ಸಂಸ್ಥೆ, ಬೈಲಹೊಂಗಲ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಸಂಗೊಳ್ಳಿ ಗ್ರಾಮದಲ್ಲಿ ಕನ್ನಡ ಶಾಲೆಯ ಕಟ್ಟಡದ ನಿರ್ಮಾಣದ ಬಗ್ಗೆ

ಳಳಟ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ೧೯೭೩ ಆಥವಾ ೧೯೭೪ನೇ ಇಸ್ವಿಯಲ್ಲಿ ಮಲಪ್ರಭಾ ಪ್ರೊಜೆಕ್ಟ್ ನೀರಾವರಿ ಇಲಾಖೆಯ ಇಂಜಿನಿಯರವರು ೮ ಶಾಲಾ ಕೋಣೆಗಳನ್ನು ಕಟ್ಟಿದ್ದು ಅವುಗಳ ಗುಣಮಟ್ಟ ಸರಿಯಾಗಿ ಇಲ್ಲದಿರುವುದರಿಂದ ಅವುಗಳನ್ನು ಉಪಯೋಗ ಮಾಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇದರ ವಿಚಾರಣೆಯನ್ನು ಲೋಕಾಯುಕ್ತರವರು ಮಾಡುತ್ತಿರುವುದು ನಿಜವೇ ? ಹಾಗಿದ್ದರೆ ಈ ವಿಚಾರಣೆ ಮುಗಿಯಲು ಇನ್ನು ಎಷ್ಟು ಕಾಲಾವಕಾಶ ಬೇಕಾಗುವುದು ?

ಇ) ಈ ೮ ಕೋಣೆಗಳನ್ನು ದುರಸ್ತಿಗೊಳಿಸಿ ಉಪಯೋಗಕ್ಕೆ ಒದಗಿಸಲು ಸರ್ಕಾರದವರು ತೆಗೆದು ಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್ ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು),–

ಅ) ಬಂದಿದೆ

ಆ) ಹೌದು.

ಲೋಕಾಯುಕ್ತದವರು ವಿಚಾರಣೆ ಮಾಡುತ್ತಿರುವುದರಿಂದ ಯಾವಾಗ ಮುಗಿಯುವುದೆಂದು ತಿಳಿಸಲು ಸಾಧ್ಯವಿಲ್ಲ.

ಇ) ೮ ಕೋಣೆಗಳು ಬಿದ್ದನಂತರ ಪುನಃ ೮ ಕೊಠಡಿಗಳನ್ನು ಮೊದಲಿದ್ದ ಸ್ಥಳದ ಪಕ್ಕದಲ್ಲಿ ನಿರ್ಮಿಸಿದ್ದು ಅದರಲ್ಲಿ ಪ್ರಾರ್ಥಮಿಕ ಶಾಲೆಯು ನಡೆಯುತ್ತಿದೆ.

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು. ಈಗ ಅಲ್ಪಕಾಲಾವಧಿ ಪ್ರಶ್ನೆಗಳು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ ಮತ್ತು ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಈ ಸದನದಲ್ಲಿ ಎರಡೂ